ಎಣಿಕೆಗೆ ಬಾರದನಂತಸುಜ್ಞಾನತಿಂ । ತಿಣಿಯೊಳೊಪ್ಪುವ ಮಹಾದೇವಾ ॥
ಹಣಹೊನ್ನು ಚವುಕದಟ್ಟಿದವೊಲು ನುಡಿಯು ಪ್ರೇ । ರಣೆಸು ನಿರಂಜನಸಿದ್ಧಾ ॥

ಹಸಿವು ತೃಷೆಯು ನಿದ್ರೆ ಮೊದಲಾದ ದುಃಖವ । ಹಸಗೆಡಿಸುವ ಶಕ್ತಿಯುಳ್ಳ ॥
ಅಸಮವೈಭವನೆ ನನ್ನೆದೆಯೊಳಗಿರು ಮೋಕ್ಷ । ರಸಿಕಾ ಚಿದಂಬರಪುರುಷಾ ॥

ಕಣ್ಮುಚ್ಚಿ ನೋಡಿದರಾತ್ಮಸುಖವ ಕರೆ । ಗುಣ್ಮುಸುವಾನಂದರೂಪಾ ॥
ಕಣ್ಮಲೆದುತ್ತಮಮತಿದೋರು ಸುಕೃತಾತ್ಮ । ರಾಣ್ಮಾ ನಿರಂಜನಸಿದ್ಧಾ ॥೩೪॥

ವ್ಯಾಪಾರಶೂನ್ಯ ಮಹಾಮಾನ್ಯ ಸುಜ್ಞಾನ । ದೀಪಾ ಲೋಕೈಕ ಪ್ರತಾಪಾ ॥
ಲೇಪಿಸಿದಂತಿರು ನನ್ನೆದೆಯೊಳಗೆ ನಿ । ರ್ಲೇಪಾ ಚಿದಂಬರಪುರುಷಾ ॥೩೫॥

ಎತ್ತನೋಡಿದೊಡತ್ತ ಮೊತ್ತದ ಪ್ರಭೆಯಾಗಿ । ಚಿತ್ತದೊಳೆಸೆವ ಚಿದಾತ್ಮಾ ॥
ಬಿತ್ತರಿಸೆನಗೆ ಸನ್ಮತಿಯನು ಮೋಕ್ಷದ । ಬಿತ್ತೆ ನಿರಂಜನಸಿದ್ಧಾ ॥೩೬॥

ತಣಿವುಗೆಟ್ಟಾಶಾಪಾಶದ ಚಿತ್ತವ । ತಣಿಪುವಾನಂದಮಯಾತ್ಮಾ ॥
ಕ್ಷಣಮಾತ್ರ ತೊಲಗದೆನ್ನೆದೆಯೊಳಗಿರು ಗುಣ । ಮಣಿಯೆ ಚಿದಂಬರ
ಪುರುಷಾ ॥೩೭॥

ಶೃಂಗಾರಸುಲಭ ಸುಜ್ಞಾನಕಲಾಧರ । ಭಂಗವಿಲ್ಲದ ಭಾಗ್ಯದೊಡೆಯಾ ॥
ಮಂಗಲಮತಿದೋರು ಸಂಗದೊಳಿರ್ದು ನಿ । ಸ್ಸಂಗಾ ನಿರಂಜನಸಿದ್ಧಾ ॥೩೮॥

ಹೊಂಬಣ್ಣಮೆಯ್ಯ ಚಕ್ರೇಶನ ಮನದಲ್ಲಿ । ಬಿಂಬಿಸಿದಂತೆ ನನ್ನೊಳಗೆ ॥
ಇಂಬುಗೊಂಡಿರು ನನ್ನ ಗುರುವೆ ನಿನ್ನನು ಬೇಡಿ । ಕೊಂಬೆ ಚಿದಂಬರಪುರುಷಾ ॥

ಗಾತ್ರದೊಳಿರುತಿರ್ದು ಗಾತ್ರಾತೀತ ವಿ । ಚಿತ್ರಸಂಸಾರವಿನಾಶಾ ॥
ಪಾತ್ರವಾಡಿದವೊಲು ನುಡಿಸು ಕಾವ್ಯವ ಭಾನು । ನೇತ್ರಾ ನಿರಂಜನಸಿದ್ಧಾ ॥

ಭರತರಾಜೇಂದ್ರನ ಮೆಚ್ಚಿನ ಗುರುವೆ ಭ । ವ್ಯರಿಗಾತ್ಮಸುಖಕಲ್ಪತರುವೆ ॥
ಕಿರಣದ ಕರುವೆ ಪ್ರಸನ್ನವಾಗೆನ್ನ ಸ । ದ್ಗುರುವೆ ಚಿದಂಬರಪುರುಷಾ ॥೪೧॥

ಸುಜನಮನೋಹರ ಸುಜ್ಞಾನಭಾಸ್ಕರ । ತ್ರಿಜಗದಾಶ್ಚರ್ಯ ಸೌಂದರ್ಯಾ ॥
ನಿಜಮತಿದೋರೊಲವಿಂದಷ್ಟಕರ್ಮದಿ । ಗ್ವಿಜಯಾ ನಿರಂಜನಸಿದ್ಧಾ ॥೪೨॥

ಅಧಿಕಕಧಿಕನೆ ಮತ್ತಮಲತ್ವಕಮಲನೆ । ಮಧುರಕತ್ಯಂತಮಧುರನೆ ॥
ಸುಧೆಯ ಸೂಸುತ ನನ್ನ ಹೃದಯದೊಳಿರು ಸುಖ । ನಿಧಿಯೆ ಚಿದಂಬರ
ಪುರುಷಾ ॥೪೩॥



ಕಾಣುತರಿವುತ ಮೆಯ್ಯ ಮಸಣಿಗೆಯೊಳಿಹ । ಮಾಣಿಕ್ಯಮುಕುರವೆ ಸ್ವಾಮಿ ॥
ಕಾಣಿಸು ನನಗೆ ಸನ್ಮತಿಯನು ನಿತ್ಯಕ । ಲ್ಯಾಣಾ ನಿರಂಜನಸಿದ್ಧಾ ॥೪೪॥

ಅತ್ಯಂತಭೋಗವನಧಿಕಸೌಭಾಗ್ಯವ । ಸತ್ಯಾತ್ಮರಿಗೆ ಮಾಳ್ಪ ಶಾಂತಾ ॥
ಸ್ತುತ್ಯಾ ನೀನೆನ್ನೊಳಗಿರು ಭವ್ಯಕಮಲಾ । ದಿತ್ಯಾ ಚಿದಂಬರಪುರುಷಾ ॥೪೫॥

ಮೂಜಗ ತುಂಬಿದ ಜೀವರಾಶಿಯ ಪೌಜ । ಮಾಜದಾವಾಗ ಕಾಣ್ಬಭವಾ ॥
ರಾಜಿತಮತಿದೋರು ಕೈವಲ್ಯಲೋಕಾಧಿ । ರಾಜಾ ನಿರಂಜನಸಿದ್ಧಾ ॥೪೬॥

ಅರಿವು ನೋಟವೆ ನಿಜರೂಪಾಗಿ ಕಾಂತಿಯು । ಕರೆವ ಜ್ಯೋತಿರ್ಮಯ ರೂಪಾ ॥
ಮರೆಯಾಗದೆನ್ನ ಮೆಯ್ಮರೆಯೊಳಗಿರು ಭವ್ಯ । ರೆರೆಯಾ ಚಿದಂಬರಪುರುಷಾ ॥

ಭವದುಃಖಭಂಜನ ಭವ್ಯಾನುರಂಜನ । ಅವಧೂತಕರ್ಮ ಸುಶರ್ಮಾ ॥
ಸವಿನುಡಿದೋರು ಸನ್ಮುನಿಮನೋಹರ ಸದಾ । ಶಿವನೆ ನಿರಂಜನಸಿದ್ಧಾ ॥

ಕಡಲ ನಗುವ ಕಡುಗಂಭೀರ ಕಡಲೊಂದು । ಕಡುಪಿಗೆ ತೆರಪಾದ ಮಹಿಮಾ ॥
ಕಡೆಸಾರದೆನ್ನೆದೆಯೊಳಗಿರು ನೀನೆಡೆ । ಬಿಡದೆ ಚಿದಂಬರಪುರುಷಾ ॥೪೯॥

ಮಾರಮದೇಭಕಂಠೀರವ ಬೋಧಪ । ಯೋರಾಶಿಪೂರ್ಣಸುಧಾಂಶು ॥
ಕಾರುಣ್ಯದೋರು ಸನ್ಮತಿದೋರು ಕರ್ಮಸಂ । ಹಾರಾ ನಿರಂಜನಸಿದ್ಧಾ ॥

ಉಲ್ವಣ ದುಃಖವನುಣಿಸುವ ಕರ್ಮದ । ಬಲ್ವಡೆಯನು ನೋಟದಿಂದ ॥
ಗೆಲ್ವ ಸಾಮರ್ಥ್ಯ ನನ್ನೆದೆಯೊಳಗಿರು ಕಡು । ಚೆಲ್ವಾ ಚಿದಂಬರಪುರುಷಾ ॥

ಪುಣ್ಯವ ಕಾಣಿಸಿ ಕೊಂಡಾಳುತಘಮಹಾ । ರಣ್ಯವ ತೊತ್ತಳದುಳಿವ ॥
ಗಣ್ಯಾ ನೀನೆನಗೆ ಸನ್ಮತಿದೋರು ಲೋಕೇಶ । ರಣ್ಯಾ ನಿರಂಜನಸಿದ್ಧಾ ॥

ನಿಂದಲ್ಲಿ ನಡೆದಲ್ಲಿ ಕುಳಿತಲ್ಲಿ ಸರ್ವತ್ರ । ಕುಂದದೆ ಕುಶಲಲೀಲೆಯನು ॥
ಸಂದಿಸುವಭವ ನನ್ನೆದೆಯೊಳಗಿರು ಚಿದಾ । ನಂದಾ ಚಿದಂಬರಪುರುಷಾ ॥

ನಡೆವಾಗ ನುಡಿವಾಗ ನೆನಹಿನೊಳಗೆ ತೋರಿ । ನಡೆದತ್ತ ಸಾಧ್ಯವ ಮಾಳ್ಪ ॥
ನಡೆನಾಟಕಾಂಗ ಸನ್ಮತಿದೋರು ರನ್ನಗ । ನ್ನಡಿಯೆ ನಿರಂಜನಸಿದ್ಧಾ ॥೫೪॥

ಈರೈದುದಿಕ್ಕನು ಮೂರುಲೋಕವನೊಂದೆ । ಬಾರಿ ತುಂಬುವ ಘನಮಹಿಮಾ ॥
ಆರು ಬಲ್ಲರು ನಿನ್ನ ಘನವ ನನ್ನೊಳಗಿರು । ವೀರಾ ಚಿದಂಬರಪುರುಷಾ ॥

ಕಮಲಪಟ್ಟಗಳೆಸಳ್ಗಳೆಪತ್ತರೊಳಗೆಸೆ । ಪವಮಳಿನಾಕ್ಷರಗಳ್ಪೈಪತ್ತಾ ॥
ಕ್ರಮದೊಳೀಕ್ಷಿಸುತ ಸನ್ಮತಿದೋರು ಲೋಕವಿ । ಕ್ರಮನೆ ನಿರಂಜನಸಿದ್ಧಾ ॥

ಒಸಗೆಯ ಮೇಲೊಸಗೆಯನಿತ್ತು ಸತತ ಭಾ । ವಿಸುವರ ಪಾಲಿಪ ಮಹಿಮಾ॥
ನಸು ಮಾಸದೆನ್ನೆದೆಯೊಳಗಿರು ನಿಚ್ಚ ಸಂ । ತಸನೆ ಚಿದಂಬರಪುರುಷಾ ॥

ಉಸುರೆಂಬ ಕರಗಸದಿಂದ ದೇಹಾತ್ಮರ । ಬೆಸುಗೆಯ ಬಿಡಿಸಿ ನೋಡಿದರೆ ॥
ಮಸುಳದೆ ತೋರ್ಪ ಮಹಾತ್ಮ ನೀನೆನಗೊಳ್ಪ । ನೆಸಗು ನಿರಂಜನಸಿದ್ಧಾ ॥

ಅಕ್ಷೋಣಿಸಾಮರ್ಥ್ಯ ಅನುಪಮಲಾವಣ್ಯ । ಮೋಕ್ಷಾಗ್ರಗಣ್ಯ ವರೇಣ್ಯಾ ॥
ಸಾಕ್ಷಾತ್ತಾಗಿ ನನ್ನೆದೆಯೊಳಗಿರು ಲೋಕ । ದಕ್ಷಾ ಚಿದಂಬರಪುರುಷಾ ॥೫೯॥

ಧಾರಣೆಯೆಂದೆಂಬ ದಂಡರತ್ನದೊಳು ಕ । ಠೋರಕರ್ಮವನೊಡೆಹೊಯ್ದ ॥
ಧೀರೋದಾತ್ತ ಸನ್ಮತಿದೋರು ದುಃಖಜ । ಜ್ಞಾರಾ ನಿರಂಜನಸಿದ್ಧಾ ॥೬೦॥

ಕತ್ತಿ ಮಿಥ್ಯಾತ್ವದ ಕದವನೊಡೆದು ಮುಕ್ತಿ । ಗುತ್ತುಂಗಧೈರ್ಯದಿ ನಡೆವ ॥
ಚಿತ್ತ ಸಂಧಾನಿ ನನ್ನೆದೆಯೊಳಿರೆನ್ನ ಸಂ । ಪತ್ತೆ ಚಿದಂಬರಪುರುಷಾ ॥೬೧॥

ನಿಚ್ಚ ಸಮರಾಧಿಭಾವನೆಯಿಂದ ಸುಖದುಃಖ । ಹೆಚ್ಚು ಕುಂದೆಂಬಿವ ಗೆಲ್ವ ॥
ಸಚ್ಚರಿತಾತ್ಮ ಸನ್ಮತಿದೋರು ಭವ್ಯರ । ಮೆಚ್ಚಿ ನಿರಂಜನಸಿದ್ಧಾ ॥೬೨॥

ಅನಿತಿನಿತೆಂದು ಸೊಲ್ಲಿಸಬಾರದನುಪಮ । ಘನಮಹಿಮೆಯ ದೇಹವಾದ ॥
ಮುನಿಜನವಂದ್ಯ ನನ್ನೆದೆಯೊಳಗಿರು ನಿರಂ । ಜನನೆ ಚಿದಂಬರಪುರುಷಾ ॥

ಎಷ್ಟೆಷ್ಟು ಕರ್ಮ ನಿರ್ಜರೆಯಾದುದೊಡನೊಡ। ನಷ್ಟಷ್ಟು ಸೌಖ್ಯವ ಪಡೆವ॥
ಶಿಷ್ಟ ನೀನೆನಗೆ ಸನ್ಮತಿದೋರು ಲೋಕಕು । ತ್ಕೃಷ್ಟಾ ನಿರಂಜನಸಿದ್ಧಾ ॥

ಸಾಕ್ಷಿಯಲ್ಲದೆ ಸುಖದುಃಖಕೆ ನೀನಲ್ಲಿ । ಸಾಕ್ಷಾದನುಭವಿಯಲ್ಲ ॥
ಮೋಕ್ಷವೆ ನೀನಲ್ತೆ ನನ್ನೊಳಗಿರು ನಿರ । ಪೇಕ್ಷಾ ಚಿದಂಬರಪುರುಷಾ ॥೬೫॥

ಪರಮಗುರುವೆ ಪರಮಾರಾಧ್ಯ ಜಯ ಪರಾ। ತ್ಪರವಸ್ತು ನಿನಗೆ ನಮೋಸ್ತು॥
ಪರಿಪಾಲಿಸೆನಗೆ ಸನ್ಮತಿಯನು ಸೌಖ್ಯತ । ತ್ಪರನೆ ನಿರಂಜನಸಿದ್ಧಾ ॥೬೬॥

ಪ್ರೌಢರ ಪರಮಪರಾಕ್ರಮರಧ್ಯಾತ್ಮ । ಗಾಢರ ಹೃದಯವೆಂದೆಂಬ ॥
ಗೂಢನಿವಾಸಿ ನನ್ನೆದೆಯೊಳಗಿರು ಲೋಕ । ರೂಢ ಚಿದಂಬರಪುರುಷಾ ॥



ಸುಗುಣರ ದೇವ ಸುಜ್ಞಾನಿಗಳರಸ ಮೋ । ಕ್ಷಗರ ಮನೋಹರಚರಿತಾ ॥
ದ್ವಿಗುಣಚತುರ್ಗುಣವೆನೆ ಮತಿದೋರು ಲೀ । ಸುಗನೆ ನಿರಂಜನಸಿದ್ಧಾ ॥೬೮॥

ಸರಸದೊಳಗೆ ಸವಿಮಾತಿನೊಳಘವ ನಿ । ರ್ಜರಿಸುವ ಸಾಮರ್ಥ್ಯವುಳ್ಳ ॥
ಪರಮ ನೀನೆನ್ನಂತರಂಗದೊಳಿರು ಸುಖಾ । ಕರನೆ ಚಿದಂಬರಪುರುಷಾ ॥೬೯॥

ತನುಗುಹೆಯೊಳು ರಾಗರೋಷದ ನದಿಯ ಚಿ। ಘ್ನನಸೇತುಗಟ್ಟಿ ಲಂಘಿಸುವ॥
ವಿನುತಾತ್ಮ ನನಗೆ ಸನ್ಮತಿದೋರು ದಿವ್ಯಲೋ । ಚನನೆ ನಿರಂಜನಸಿದ್ಧಾ ॥

ಕರ್ಮದಾಸ್ರವವೆಂಬ ಮಳೆಯನಾತ್ಮಧ್ಯಾನ । ಮರ್ಮಛತ್ರದಿ ನಿವಾರಿಸುವ॥
ನಿರ್ಮಮಕಾರ ನನ್ನೆದೆಯೊಳಗಿರು ಶುದ್ಧ । ಧರ್ಮಾ ಚಿದಂಬರಪುರುಷಾ ॥

ಬಳಲಿದ ಕರಣಗಳಿಗೆ ಶಾಂತಿಮಾಡಿ ಮುಂ । ದಲಘಾತಪಕೆ ಪಟುಮಾಳ್ಪ ॥
ಕಲೆವಂತ ನನಗೆ ಸನ್ಮತಿದೋರು ಜಗಕತಿ । ಬಲನೆ ನಿರಂಜನಸಿದ್ಧಾ ॥೭೨॥

ತೀರ್ಥಕೆ ತೀರ್ಥವೆ ಸಕಲಶಾಸ್ತ್ರಗಳ ಸಾ । ರಾರ್ಥವೆ ಮುಕ್ತಿಯ ಮೊದಲೆ ॥
ಆರ್ತಿಯೊಳೆನ್ನೆದೆಯೊಳಗಿರು ಸ್ವಪರಹಿ । ತಾರ್ಥಾ ಚಿದಂಬರಪುರುಷಾ ॥೭೩॥

ಮಂಗಳಮಹಿಮ ಮನೋಹರರೂಪ ಸೌ । ಖ್ಯಂಗಳ ಸಾರ ಶೃಂಗಾರ ॥
ಕಂಗೊಳಿಸೆನಗೆ ಸನ್ಮತಿಯನು ಸರಸಕ । ಲಾಂಗಾ ನಿರಂಜನಸಿದ್ಧಾ ॥೭೪॥

ಪಂಕಜಷಟ್ಖಂಡದೊಳಗೆ ಸರ್ವಾಂಗದೊ । ಳಂಕಮಾಲೆಯ ಲಿಪಿಯಂತೆ ॥
ಅಂಕಿಸಿ ನೋಡುತೆನ್ನೆದೆಯೊಳಗಿರು ನಿಷ್ಕ । ಳಂಕಾ ಚಿದಂಬರಪುರುಷಾ ॥೭೫॥

ಧ್ಯಾನಿಸುವವರಿಗೆ ದಿವ್ಯಭೋಗಗಳ ಸಂ । ಧಾನಿಸುವನುಪಮಮಹಿಮಾ ॥
ಜ್ಞಾನಿಗಳೊಡೆಯ ಸನ್ಮತಿದೋರು ತಾಮಸ । ಹೀನ ನಿರಂಜನಸಿದ್ಧಾ ॥೭೬॥

ತೆರೆಯ ಮೇಲ್ತೆರೆಗಳ ತೋರುವಿಂಗಡಲಂತೆ । ಸಿರಿಯ ಮೇಲ್ಸಿರಿಯ
ಸೂಚಿಸುವ ॥
ಚರಿತಾರ್ಥ ನನ್ನಂತರಂಗದೊಳಿರು ಮನೋ । ಹರನೆ ಚಿದಂಬರಪುರುಷಾ ॥

ಉತ್ಸಾಹವರ್ಧನ ಉನ್ಮಾರ್ಗಮರ್ದನ । ಚಿತ್ಸುಖಿ ಚಿತ್ಪ್ರಾರ್ಥಚರಿತಾ ॥
ಸತ್ಸಾರಮತಿದೋರು ಸನ್ಮುನಿಹೃದಯಶ್ರೀ । ವತ್ಸಾ ನಿರಂಜನಸಿದ್ಧಾ ॥೭೮॥

ನಿಮಿಷಮಾತ್ರವು ದುಃಖವಿಲ್ಲದೆ ಸೌಖ್ಯಸಂ । ಭ್ರಮದೊಳೊಪ್ಪುವ
ಮಹಾದೇವಾ ॥
ಅಮೃತವ ಸೂಸುತೆನ್ನೆದೆಯೊಳಗಿರು ಸುಖೋ। ತ್ತಮನೆ ಚಿದಂಬರಪುರುಷಾ॥

ವಿವಿಧ ಸಿದ್ಧಿಗಳ ನೆನೆಹಿಕೊಂಡು ಸಂಸಿದ್ಧಿ । ಯುವತಿಯು ಹಸೆನಿಲ್ವ ನೀರಾ ॥
ಸವಿಯ ಸಾಲಿಡುವ ಸನ್ಮತಿದೋರು ಭವ್ಯಬಾಂ । ಧವನೆ ನಿರಂಜನಸಿದ್ಧಾ ॥
ಮನಮುಟ್ಟಿ ನೋಡುವ ಸುಖಿಗೆಡೆಬಿಡವಿಲ್ಲ। ದನುಪಮಸುಖವೀವ ಸುಲಭಾ।
ಅನುದಿನ ಚಲಿಸದೆನ್ನೆದೆಯೊಳಗಿರು ಸುಖ । ವನಧಿ ಚಿದಂಬರಪುರುಷಾ ॥೮೩॥
ಮುಕ್ತಿಕಾಂತೆಯ ಮದುವೆಗೆ ಮುನ್ನ ಜಗವ ಸು । ಖೋಕ್ತಿಯೋಳ್ಮನ್ನಿಪ
ಸೊಬಗಾ ॥
ವ್ಯಕ್ತಮತಿಯ ತೋರು ಜಯ ಜಯ ಪರಮಾವ । ರಕ್ತಾ ನಿರಂಜನಸಿದ್ಧಾ ॥
ಪಡಿಸಣಗೊಡುತುಂಬರಂತೆ ಲೋಕಕೆ ಸುಖ। ಗೊಡುತತಿಸುಖವ ಭೋಗಿಸುವ॥
ಕಡುಸುಖಿ ನನ್ನೆದೆಯೊಳು ನಿಂದು ಸುಖವ ಸಂ । ಗಡಿಸು ಚಿದಂಬರಪುರುಷಾ॥
ಪೊಡವಿ ನರ್ತಿಸೆ ಮುಕ್ತಿಸತಿಯು ಮದುವೆಯಾಗಿ। ಒಡಗೂಡಿ ಘನ ಸುಖವೆಂಬ॥
ಕಡಲೊಳೋಲಾಡುವ ಸೊಬಗ ಸತ್ಕಾವ್ಯವ । ನಡೆಸು ನಿರಂಜನಸಿದ್ಧಾ ॥೮೪॥
ನೆನೆದವರಿಗೆ ನೆನೆದರ್ಥವ ಸಾರ್ಚುವ । ಅನುಪಮಾನಂದಸ್ವರೂಪಾ ॥
ಇನಿಸಗಲದೆ ನನ್ನ ಮನದೊಳಿರಮೃತವ । ರ್ಧನನೆ ಚಿದಂಬರಪುರುಷಾ ॥೮೫॥
ಮನ್ನಣೆಕಾರ ಮನೋಹರರೂಪ ಲೋ । ಕೋನ್ನತಕೋಮಲಚರಿತಾ ॥
ಸನ್ನುತಮತಿದೋರು ಶರಣಾಗು ಸೌಖ್ಯಸಂ । ಪನ್ನಾ ನಿರಂಜನಸಿದ್ಧಾ ॥೮೬॥
ಸರ್ವಜನಾನಂದ ಸರ್ವಕಲಾಧರ । ಸರ್ವಸೌಭಾಗ್ಯಭೋಗಾಂಗಾ ॥
ಸರ್ವದಾ ನನ್ನಂತರಂಗದೊಳಿರು ಸದ್ಗು । ಣೋರ್ವಿ ಚಿದಂಬರಪುರುಷಾ॥೮೭॥
ನಿತ್ಯನಿಮಂಗಲ ನಿತ್ಯಶೃಂಗಾರಗೌರವ । ನಿತ್ಯಲೀಲಾಂಗತರಂಗಾ ॥
ನಿತ್ಯವೈಭವನೆ ಸನ್ಮತಿದೋರು ಸೌಖ್ಯಸಾ । ಹಿತ್ಯಾ ನಿರಂಜನಸಿದ್ಧಾ ॥೮೮॥
ಆವಾಗ ಭಾವಿಸುವರಿಗನುಕೂಲಸೌ । ಖ್ಯಾವಳಿಯನೆ ಸಮನಿಸುವ ॥
ದೇವಾ ನೀನೆನ್ನಂತರಂಗದೊಳಿರು ಶುದ್ಧ । ಭಾವಾ ಚಿದಂಬರಪುರುಷಾ ॥೮೯॥
ಗರ್ವಗಜಾಸುರಮರ್ದನ ದುಷ್ಕರ್ಮ । ಪರ್ವತದಂಭೋಳಿರೂಪಾ ॥
ನಿರ್ವಿಘ್ನಮತಿದೋರು ನತನರನಾಗಸು । ಪರ್ವಾ ನಿರಂಜನಸಿದ್ಧಾ ॥೯೦॥
ಎಲ್ಲೆಲ್ಲಿ ಪರಮಮಂಗಲವುಂಟಾತ್ಮರ । ನಲ್ಲಲ್ಲಿಗೈದಿಪ ಪರಮಾ ॥
ಎಲ್ಲಿಗೂ ತೆರಳದೆನ್ನೆದೆಯೊಳಿರಾನಂದ । ಮಲ್ಲಾ ಚಿದಂಬರಪುರುಷಾ ॥೯೧॥



ಜ್ಯೋತಿಸ್ಸ್ವರೂಪ ಜೊನ್ನರಸನ ಪಗಲಾಣ್ಮ । ನಾತತತೇಜೋಭಿರಾಮಾ ॥
ನೂತನಮತಿದೋರು ಜಯ ಜಯ ಲೋಕವಿ । ಖ್ಯಾತಾ ನಿರಂಜನಸಿದ್ಧಾ ॥
ಸಂತತ ಪಾಪವ ತೊಳೆವ ಪಾವನತೀರ್ಥ । ಕಾಂತಾ ನೀನಗಲದೆ ನನ್ನ ॥
ಅಂತರಂಗದೊಳು ಥಾಳಿಸುತಿರು ಪರಮಾವಿ । ಶ್ರಾಂತಾ ಚಿದಂಬರಪುರುಷಾ ॥
ಮಂಗಲಾಚಾರ್ಯ ಮಂದರಧೈರ್ಯ ಭವ್ಯಾಂತ । ರಂಗೈಕಗಮ್ಯಸುಸೌಮ್ಯಾ ॥
ಸಂಗೀತರಸಿಕ ಸನ್ಮತಿದೋರು ಚಿದ್ಘನ । ಲಿಂಗ ನಿರಂಜನಸಿದ್ಧಾ ॥೯೪॥
ಮಾತುಮಾತಿಗೆ ದಿನದಿನಕೆ ಕ್ಷಣಕೆ ನವ್ಯ । ನೂತನಭಾವವ ತೋರ್ಪಾ ॥
ಸಾತಿಶಯಾತ್ಮ ನನ್ನೆದೆಯೊಳಿರಮೃತನಿ-। ಕೇತಾ ಚಿದಂಬರಪುರುಷಾ ॥೯೫॥
ತಾಯಿಲ್ಲ ತಂದೆಯಿಲ್ಲಂತ್ಯವಿಲ್ಲಾದಿಯಿ। ಲ್ಲಾಯಾಸವಿನಿತಿಲ್ಲದಭವಾ ॥
ದಾಯವಾದೋರೆನಗೆ ಸನ್ಮತಿಯನು ನಿರಘ ನಿ । ರ್ಮಾಯಮಾ ನಿರಂಜನಸಿದ್ಧಾ ॥
ನಿಟ್ಟಿಸುತಖಿಲವೀರಾನಾಯೋಗವ ಬೇರು । ಪಟ್ಟಿಹ ವಿಮಲಸ್ವರೂಪಾ ॥
ದಿಟ್ಟಿಮನಸುತುಂಬಿ ನನ್ನೊಳಿರಾ ಮೋಕ್ಷ । ದಿಟ್ಟಾ ಚಿದಂಬರಪುರುಷಾ ॥೯೭॥
ನಿರ್ಮಲೋಪಾಯ ನಿಶ್ಚಿಂತಾಭಿಪ್ರಾಯಜ್ಯೋ । ತಿರ್ಮಯತೀವ್ರ ಪ್ರಕಾಶಾ ॥
ನರ್ಮದೊಳ್ಕಾವ್ಯವ ನಡೆಸು ನವೀನಾತ್ಮ । ಧರ್ಮಾ ನಿರಂಜನಸಿದ್ಧಾ ॥೯೮॥
ನುಡಿವುದು ಪುದ್ಗಲಕೇಳ್ವುದು ಪುದ್ಗಲ । ಕಡೆಗೆ ಪುದ್ಗಲಸ್ನೇಹಕೋಪಾ ॥
ಜಡದೇಹನೂಂಕಿ ನನ್ನೆದೆಯೊಳಿರಯ್ಯ ಬಾ । ನೊಡಲಾ ಚಿದಂಬರಪುರುಷಾ ॥
ಜಾಣರೊಡೆಯ ಚದುರರದೇವ ಪ್ರೌಢರ । ಪ್ರಾಣವಲ್ಲಭರ ಬಲ್ಲಹನೆ ॥
ಆಣಿಮುತ್ತುಗಳಂತೆ ನುಡಿದೋರು ವಾಕ್ಪುಷ್ಪ । ಬಾಣಾ ನಿರಂಜನಸಿದ್ಧಾ ॥
ತ್ರಿಜಗವನತ್ತಿತ್ತಲಲ್ಲಾಡಿಸುವ ಶಕ್ತಿ । ನಿಜವಾದ ನಿಬಿಡಸಾಮರ್ಥ್ಯಾ ॥
ಅಜರಾಮರಾತ್ಮ ನನ್ನೆದೆಯೊಳಿರಾನಂದ। ಧ್ವಜನೆ ಚಿದಂಬರಪುರುಷಾ ॥೧೦೦॥
ನಾಮಮೋಹನಸಿದ್ಧ ರೂಪಮೋಹನಸಿದ್ಧ । ಸ್ವಾಮಿತ್ವಮೋಹನಸಿದ್ಧಾ ॥
ಕೋಮಲವಾಕ್ಯಮೋಹನಸಿದ್ಧ ಜಯ ಕಳಾ । ಗ್ರಾಮಣಾ ನಿರಂಜನಸಿದ್ಧಾ ॥
ಅಘಟಿನ ಕರ್ಮವ ಮೃದುಭಾವದಿಂ ಗೆಲ್ದ । ಅಧಿಕಚಾತುರ್ಯ ಸುವೀರ್ಯಾ॥
ಬುಧಜನಾರ್ಚಿತ ನನ್ನ ಮನದೊಳಿರಮೃತಮಾ। ರಧಿಯೆ ಚಿದಂಬರಪುರುಷಾ॥

ಒಡಲು ಬೇರಾತ್ಮ ಬೇರೆಂಬ ತತ್ತ್ವಾರ್ಥವ । ನುಡಿನುಡಿದೆಲ್ಲರ ಮನದ ॥
ಜಡವ ಜಾರಿಸುವ ಜಗನ್ನಾಥ ಜಾಣ್ಮೆಯ । ನುಡಿಸು ನಿರಂಜನಸಿದ್ಧಾ ॥

ನುಡಿಯಿಂದ ನೋಟದಿಂದಾಟದಿಂದಘದ ಪೆ। ರ್ಪಡೆಯ ತೊತ್ತಳದುಳಿದಭವಾ॥
ಬಿಡದೆ ನನ್ನಂತರಂಗದೊಳಿರು ಕಾಂತಿಕಾ । ಲಿಡುತ ಚಿದಂಬರಪುರುಷಾ ॥

ಕರ್ಮ ಚೇಷ್ಟಿಸಿದಂತೆ ಚರಿಸುವರನು ಕೋಪ। ಕೂರ್ಮೆಯಿಲ್ಲದೆ ನೋಡುತಿರ್ಪ॥
ನಿರ್ಮಳಾನಂದ ಸನ್ಮತಿದೋರು ಗುರುವೆ ನಿ । ಷ್ಕರ್ಮಾ ನಿರಂಜನಸಿದ್ಧಾ ॥

ಮೇರುವನೇರಿ ಮೇದಿನಿಯ ನೋಳ್ಪಂತೆ ಧ್ಯಾ। ನಾರೂಢನಾಗಿ ಲೋಕವನು॥
ಆರಯ್ವುತೆನ್ನಂತರಂಗದೊಳಿರು ಸುಖಿ । ಧೀರಾ ಚಿದಂಬರಪುರುಷಾ ॥

ವಿಖ್ಯಾತಮಹಿಮ ವಿಶ್ವಾರಾಧ್ಯ ವಿಮಲಪ್ರ। ಖ್ಯಾಖ್ಯಾ ಸುಬೋಧ ನಿಧಾನಾ॥
ಸೌಖ್ಯಾಂಗ ಮತಿದೋರು ಸದ್ಗುಣ ಶಿವಗಣ । ಮುಖ್ಯಾ ನಿರಂಜನಸಿದ್ಧಾ ॥

ಧ್ಯಾನಚಕ್ರದಿ ಕರ್ಮಗಳನರೆಯಟ್ಟಿ ಸು । ಜ್ಞಾನಸಾಮ್ರಾಜ್ಯವನಾಳ್ವ ॥
ಶ್ರೀನಾಥ ನನ್ನಂತರಂಗದೊಳಿರು ಸುಖಿ । ಸ್ಥಾನಾ ಚಿದಂಬರಪುರುಷಾ ॥

ರಾಗಾದಿಪರಿಭವವಿಲ್ಲಾಗಿ ತ್ರಿಕರಣ । ಯೋಗವಿದ್ದರು ಬಂಧವಳಿದ
ಯೋಗವಿಜಯನೆ ಸನ್ಮತಿದೋರು ಶ್ರೀವೀತ । ರಾಗಾ ನಿರಂಜನಸಿದ್ಧಾ ॥

ಕಿರುವೆಳಗಿಂದ ಧರ್ಮಧ್ಯಾನರೂಪ ಪೊ । ಚ್ಚರಿಪ ಮಹಾಪ್ರಭೆಯಿಂದ
ಮಿರುಪ ಶುಕ್ಲಧ್ಯಾನರೂಪ ನನ್ನೆದೆಯೊಳಿ । ರೆರೆಯಾ ಚಿದಂಬರಪುರುಷಾ ॥

ಸುಜ್ಞಾನಶೇಖರ ಸುಕೃತಾತ್ಮರೊಡೆಯ ಗು । ಣಜ್ಞರ ಮನಮೆಚ್ಚಿನಭವಾ ॥
ವಿಜ್ಞಾನದೋರು ಸನ್ಮತಿದೋರು ಗುರುವೆ ಸ । ರ್ವಜ್ಞಾ ನಿರಂಜನಸಿದ್ಧಾ ॥

ಅಂಬರ ಮೆಯ್ಯಾದ ಪುರುಷ ಸುಜ್ಞಾನವೆ । ತುಂಬಿ ಮೆಯ್ಯಾದ ಸತ್ಪುರುಷಾ ॥
ತಂಬೆಳಗಿನ ಮೆಯ್ಯ ಪುರುಷ ನಮೋಸ್ತು ಚಿ। ದಂಬರಪುರುಷಾ ಚಿತ್ಪುರುಷಾ॥

ಶ್ರೀನಿಧಿ ಗುಣನಿಧಿ ಸುಖನಿಧಿ ಮೋಕ್ಷಲೀ ।ಲಾನಿಧಿ ತೀರ್ಥವಾರಿನಿಧಿ ॥
ಭಾನಿಧಿ ಶುಭನಿಧಿ ಮತಿದೋರು ಬೋಧನಿ । ಧಾನಾ ನಿರಂಜನಸಿದ್ಧಾ ॥೧೧೪॥

ಇಂದ್ರಿಯವೆಂಬ ಭೃತ್ಯರುಗೂಡಿ ಸುಖಿಸುತ । ತೀಂದ್ರಿಯಸುಖವ ಸಾಧಿಸುವ ॥
ಇಂದ್ರವಂದಿತನೆ ನನ್ನೆದೆಯೊಳಿರಮೃತಯೋ । ಗೀಂದ್ರಾ ಚಿದಂಬರಪುರುಷಾ॥



ಬಯಲಲ್ಲಿ ಬರೆದ ಪುರುಷರೂಪೊ ಪ್ರಭೆಯ ಬೊಂ । ಬೆಯೊಯೆನೆತೋರ್ಪ
ಸ್ವರೂಪಾ ॥
ಜಯ ಜಯ ಗುರುವೆ ಸನ್ಮತಿದೋರು ಲೋಕವಿ । ಸ್ಮಯನೆ ನಿರಂಜನಸಿದ್ಧಾ ॥

ತೋರಿದ ಚಿಂತೆಯ ನಿಮಿಷಮಾತ್ರದಿ ಕಡೆ । ಜಾರಿಸುವತಿಶಯರೂಪ ॥
ಜಾರದೆ ನನ್ನಂತರಂಗದೊಳಿರು ಬಲ್ಮೆ । ಕಾರಾ ಚಿದಂಬರಪುರುಷಾ ॥೧೧೭॥
ಚೆನ್ನಿಗರರಸ ಚೆಲ್ವರದೇವ ಸೊಬಗರ । ರನ್ನಾ ಲಾವಣ್ಯಾಂಗರೊಡೆಯಾ ॥
ಬಿನ್ನಣಿಸೆನೆಗೆ ಸನ್ಮತಿಯನು ಸೌಖ್ಯಸಂ । ಪನ್ನಾ ನಿರಂಜನಸಿದ್ಧಾ ॥೧೧೮॥

ಅಸಹಾಯವಿಕ್ರಮ ವಿಕ್ರಾಂತರೊಡೆಯ ತಾ । ಮಸಹರ ಸಂತತಾನಂದಾ ॥
ನಸುಮಾಸದೆನ್ನಂತರಂಗದೊಳಿರು ಪ್ರಭಾ । ವಸನಾ ಚಿದಂಬರಪುರುಷಾ ॥

ಮಾಯೆಯ ಮೆಟ್ಟಿ ನಾಟ್ಯವನಾಡುತಾತ್ಮಸಾ । ರಾಯವ ಪ್ರಕಟಿಸುತಿಳೆಗೆ ॥
ಆಯಾಸವಿಲ್ಲದೆ ನಡೆಸು ಕಾವ್ಯವ ಸುವಿ । ಡಾಯಾ ನಿರಂಜನಸಿದ್ಧಾ ॥೧೨೦॥
ಸಂತೋಷವಾಗಲಿ ಚಿಂತೆಯಾಗಲಿ ತೋರ । ಲಂತವು ನಿತ್ಯವಲ್ಲೆಂದು ॥
ಚಿಂತಿಸುತೆನ್ನೆದೆಯೊಳಗಿರು ಚಿಂತಾತಿ । ಕ್ರಾಂತಾ ಚಿದಂಬರಪುರುಷಾ ॥೧೨೧॥

ನಿತ್ಯ ನಿನ್ನೊಳು ನಿಂದು ನಿನ್ನನೆ ಧ್ಯಾನಿಸಿ । ಸತ್ಯಾಸತ್ಯವ ಕಾಣ್ಬ ॥
ಅತ್ಯಂತಸುಖಿಯ ಸನ್ಮತಿದೋರು ಭವ್ಯಸಾಂ । ಗತ್ಯಾ ನಿರಂಜನಸಿದ್ಧಾ ॥

ಇದಿರ ಗುಣವ ನಿನ್ನ ಗುಣವ ಪರೀಕ್ಷಿಸು । ತಿದಿರ ಗುಣವ ಕೂಡೆ ಮರೆದು ॥
ಅದಿದೆಂಬ ಸಂಕಲ್ಪವಳಿದು ನನ್ನೊಳಗಿರು । ಚದುರಾ ಚಿದಂಬರಪುರುಷಾ ॥

ಅಚ್ಚಬೆಳ್ದಿಂಗಳ ಬೊಂಬೆಯೊಯೆನೆ ಮನ । ಕಚ್ಚರಿದಾವಾಗ ತೋರ್ಪ ॥
ಸಚ್ಚಿದಾನಂದ ಸನ್ಮತಿದೋರು ಭವ್ಯರ । ಮೆಚ್ಚಿ ನಿರಂಜನಸಿದ್ಧಾ ॥೧೨೪॥
ದಿನದಿನಕೆಯ್ದುವ ಸುಖದುಃಖಸಖಿಶತ್ರು । ಧನದಾರಿದ್ರ್ಯವ ಕನಸೆಂದು ॥
ಅನುಗಾಣಿಸುತ ನನ್ನ ನೆನಹಿನೊಳಿರು ಸುಖಾ । ಸನನೆ ಚಿದಂಬರಪುರುಷಾ ॥

ಭಕ್ತರೊಡೆಯ ಭವ್ಯರೊಡೆಯ ನವೀನವಿ । ರಕ್ತರೊಡೆಯ ವೀರರೊಡೆಯಾ॥
ಶಕ್ತರೊಡೆಯ ಶಾಂತರೊಡೆಯ ಸನ್ಮತಿದೋರು । ಮುಕ್ತಾ ನಿರಂಜನಸಿದ್ಧಾ ॥
ಯೋಗವಾಗಲಿ ಭೋಗವಾಗಲಿ ನಿನ್ನ ಸಂ । ಯೋಗವಾದರೆ ತಾನೆ ಮುಕ್ತಿ ॥
ಶ್ರೀಗುರುನಾಥ ನನ್ನೆದೆಯೊಳಿರೆಲೆ ಮಹಾ । ಭೋಗಿ ಚಿದಂಬರಪುರುಷಾ ॥

ಸಾಕ್ಷಾನ್ಮೋಕ್ಷಕಾರಣನೆ ಸರ್ವಜ್ಞನೆ । ಮೋಕ್ಷಗಾಮಿಗಳ ಮೋಹನನೆ ॥
ಮೋಕ್ಷವಿಜಯನೆ ಸನ್ಮತಿದೋರು ತ್ರಿಭುವನ । ಚಕ್ಷು ನಿರಂಜನಸಿದ್ಧಾ ॥

ಚಿಂತಾರತ್ನ ರತ್ನಾಕರಸ್ವಾಮಿ ಸು । ಕಾಂತಾ ನೀನಗಲದೆ ನನ್ನ ॥
ಅಂತರಂಗದೊಳಿರು ಜಯ ಜಯ ಗುರುವೆ ನಿ । ಶ್ಚಿಂತಾ ಚಿದಂಬರಪುರುಷಾ ॥

ಅತಿಶಯರೂಪ ರೂಪಾತೀತ ದೇಹವ । ರ್ಜಿತ ದೇಹಯುತ ಚಿನ್ಮಯಾಂಗಾ ॥
ಮತಿಗಮ್ಯ ಮತಿದೋರು ಜಯಜಯ ಗುರುವೆ ಅ । ಪ್ರತಿಮಾ ನಿರಂಜನಸಿದ್ಧಾ

ವಿದ್ಯಾರೂಪನೆ ವಿಶ್ವರೂಪನೆ । ಸದ್ಯೋಜಾತನೆ ಶಾಂತಾ ॥
ಚೋದ್ಯಪುರುಷನೆ ಚೊಕ್ಕನೆ ಜಯ ಭವರೋಗ । ವೈದ್ಯಾ ಚಿದಂಬರಪುರುಷಾ

ಶ್ರೀಕರ ಬೋಧರತ್ನಾಕರ ದಿವ್ಯಗು । ಣಾಕರಾ ವಾಚಾಮಗಮ್ಯಾ ॥
ಲೋಕತ್ರಯಾಧಿಪ ಮತಿದೋರು ಸೂರ್ಯಪ್ರ । ಕಾಶಾ ನಿರಂಜನಸಿದ್ಧಾ ॥

ಸುಜ್ಞಾನರೂಪನೆ ಸುಜ್ಞಾನಕಾಯನೆ । ಸುಜ್ಞಾನಶೃಂಗಾರಹಾರಾ ॥
ಸುಜ್ಞಾನಸೂರ್ಯ ನನ್ನಂತರಂಗದೊಳಿರು । ಪ್ರಜ್ಞಾ ಚಿದಂಬರಪುರುಷಾ ॥

ದುರಿತಗೋಧೂಮಘರಟ್ಟ ಸುಚ್ಯುತಕಿಟ್ಟ । ವರಹೇಮನಿಭ ಶುದ್ಧವಸ್ತು ॥
ಕರುಣಿಸು ಮತಿಯ ರತ್ನಾಕರಸಿದ್ಧನ । ಗುರುವೆ ನಿರಂಜನಸಿದ್ಧಾ ॥೧೩೪॥

ಕಾಮವಿರೋಧಿ ಕಾಮಿತಫಲದಾಯಕ । ವ್ಯೋಮಸನ್ನಿಭನೆ ಚಿನ್ಮಯನೆ ॥
ಕ್ಷೇಮಂಕರನೆ ನನ್ನಂತರಂಗದೊಳಿರು । ಸ್ವಾಮೀ ಚಿದಂಬರಪುರುಷಾ ॥೧೩೫॥

ಬಯಲಪುರುಷ ಬಯಲಾಕಾರ ಬಕ್ಕಟ । ಬಯಲರೂಪನೆ ಬಯಲಾಂಗಾ ॥
ಬಯಲಾಧಾರನೆ ಮತಿದೋರು ನಿಚ್ಚ ನಿ । ರ್ಭಯಲಾ ನಿರಂಜನಸಿದ್ಧಾ ॥

ಅಕ್ಷರಾಭರಣ ನಿರಕ್ಷರಬೋಧ ಪಾ । ಪಕ್ಷಯ ಪರಮಪವಿತ್ರಾ ॥
ರಕ್ಷಿಸು ನನ್ನಂತರಂಗದೊಳಿರು ವಿಮ । ಲಾಕ್ಷಾ ಚಿದಂಬರಪುರುಷಾ ॥೧೩೬॥

ತ್ರಿಭುವನಸಾರ ದಿವ್ಯಧ್ವನಿಸಾರ ಮ । ತ್ತಭಿನವತತ್ತ್ವಾರ್ಥಸಾರಾ ।
ವಿಭವೈಕಸಾರ ವಿದ್ಯಾಸಾರ ಮತಿದೋರು । ಪ್ರಭುವೆ ನಿರಂಜನಸಿದ್ಧಾ ॥

ವಿಮಲಲೋಚನ ವಿಮಲಾಕಾರ ವಿಮಲಾಂಗ । ವಿಮಲಪುರುಷ ವಿಮಲಾತ್ಮಾ ॥
ವಿಮಲದೊಳೆನ್ನಂತರಂಗದೊಳಿರು ಲೋಕ । ವಿಮಲಾ ಚಿದಂಬರಪುರುಷಾ ॥



ಮೋಕ್ಷಮಾರ್ಗನೆ ಮೋಕ್ಷಕಾರಣ ಸಾಕ್ಷಾ । ನ್ಮೋಕ್ಷರೂಪನೆ ಮೋಕ್ಷಸುಖಿನೆ ॥
ಮೋಕ್ಷಸಂಪದನೆ ಸನ್ಮತಿದೋರು ಮಾನ್ಯನೋ । ರಕ್ಷಾ ನಿರಂಜನಸಿದ್ಧಾ ॥

ಸಕಲವಿಕಲ್ಪವರ್ಜಿತ ವಿಶ್ವತತ್ತ್ವದೀ । ಪಕ ದಿವ್ಯಸುಜ್ಞಾನರೂಪಾ ॥
ಅಕಳಂಕ ನನ್ನೆದೆಯೊಳಗಿರು ತ್ರಿಭುವನ । ಮುಕುರಾ ಚಿದಂಬರಪುರುಷಾ ॥

ತಿಳಿವೆಳಗಿನ ತೀರ್ಥರೂಪನೆ ತಿಂಗಳ । ಬೆಳಗಿನೊಳಾದ ಪುತ್ಥಳಿಯೆ ।
ತಳುಮಾಡದೆನಗೆ ಸನ್ಮತಿದೋರು ಸುಜ್ಞಾನ । ನಿಳಯಾ ನಿರಂಜನಸಿದ್ಧಾ ॥

ಹಿಂದುಮುಂದೆಡಬಲಪೊರಗೊಳಗಡಿಕಡೆ । ಯೆಂದೆನ್ನದಮೃತಸ್ವರೂಪಾ ॥
ಎಂದೆಂದು ನನ್ನ ಚಿತ್ತದೊಳಿರು ಸಚ್ಚಿದಾ । ನಂದಾ ಚಿದಂಬರಪುರುಷಾ ॥

ಅಣಿಮಾದಿಗುಣವೆಂಟ ತೃಣಕೆಣೆಗಾಣ್ಬ ಸ । ದ್ಗುಣವೆಂಟನೊಡಗೂಡಿದಭವಾ ॥
ಮಣಿಮುಕುರಂಬೊಲು ಮತಿದೋರು ಲೋಕದ । ರ್ಪಣನೆ ನಿರಂಜನಸಿದ್ಧಾ ॥

ಸಂಸಾರದುಃಖನಿವಾರಣ ಸದ್ಗುಣೋ । ತ್ತಂಸ ನೀನೆನ್ನ ಭಾವದೊಳು ॥
ಅಂಶುವೆ ರೂಪಾಗಿ ಬೆಳಗುತಿರಮಲಬೋ । ಧಾಂಶು ಚಿದಂಬರಪುರುಷಾ ॥

ಅಚ್ಯುತಾನಂತ ಸದ್ಗುಣವೃಂದ ಚಂಡಮ । ರೀಚ್ಯಮೃತಾಂಶುಪ್ರಕಾಶಾ ॥
ಸಂಚ್ಯುತಕರ್ಮ ಸನ್ಮತಿದೋರು ಗುರುವೆ ನಿ । ರ್ವಾಚ್ಯಾ ನಿರಂಜನಸಿದ್ಧಾ ॥

ಸಿರಿಗೇನು ಕಡಮೆ ಸಿಂಗರಕೇನು ಕಡಮೆ ಸೌಂ । ದರಕೇನು ಕಡಮೆ ನೀನಿರಲು ॥
ಎರವಿಲ್ಲದೆನ್ನಂತರಂಗದೊಳಿರು ಪ್ರಬಂ । ಧುರನೆ ಚಿದಂಬರಪುರುಷಾ ॥

ವಿಶ್ವವಿದ್ಯಾಧರ ವಿಶ್ವತೋಲೋಚನ । ವಿಶ್ವತೋಮುಖ ವಿಶ್ವತೋಂಶು ॥
ವಿಶ್ವೇಶ ಮತಿದೋರು ದುಷ್ಕರ್ಮತೃಣಲೋಹಿ । ತಾಶ್ವಾ ನಿರಂಜನಸಿದ್ಧಾ ॥

ವ್ಯವಹಾರಧರ್ಮಕುದ್ಯಾಪನೆಗೆಯ್ದತ್ತಿ । ಸುವಿಶುದ್ಧ ನಿಶ್ಚಯವಡೆದು ॥
ಅವಿಚಳನಾಗಿ ನನ್ನೆದೆಯೊಳಿರಮೃತಮಾ । ಧವನೆ ಚಿದಂಬರಪುರುಷಾ ॥

ಅಷ್ಟಕರ್ಮಾರಣ್ಯದಾವಾಗ್ನಿ ವಿಮಲಗು । ಣಾಷ್ಟಕರೂಪಾದ ಸೊಬಗಾ ॥
ಶಿಷ್ಟರಾರಾಧ್ಯ ಸನ್ಮತಿದೋರು ನಿತ್ಯಸಂ । ತುಷ್ಟಾ ನಿರಂಜನಸಿದ್ಧಾ ॥

ಪರಿವಿಡಿಯಿಂದೆಯ್ದಿ ಭರತಚಕ್ರೇಶ್ವರ । ನುರದಲ್ಲಿ ನೆಲಸಿದಂದದೊಳು ॥
ಸ್ಥಿರವಾಗಿ ನನ್ನಂತರಂಗದೊಳಿರು ಗುಣಾ । ಕರನೆ ಚಿದಂಬರಪುರುಷಾ ॥

ಬಡವರಾಧಾರ ಬಲ್ಲಿದರ ಮನೋಹರ । ಕಡುಚದುರರ ಮೆಚ್ಚುಕಾರಾ ॥
ತಡವೇನು ಮತಿದೋರು ಪರುಷ ಮುಟ್ಟಿಯುಂ ಪರ್ವ। ಗಡನೆ ನಿರಂಜನಸಿದ್ಧಾ ॥

ಅಸಮಸುಜ್ಞಾನ ರಾಜ್ಯವ ದಶದಿಕ್ಕ ಪೂ । ರಿಸಲಾಳುತೆನ್ನ ಚಿತ್ತದೊಳು ॥
ಪೊಸಕಾಂತಿ ರೂಪಾಗಿ ರಾಜಿಸುತಿರು ನಿರ । ಲಸನೆ ಚಿದಂಬರಪುರುಷಾ ॥

ಈವರ ದೇವ ಕಾವರ ದೇವ ನಿಜಭವ್ಯ । ಜೀವರ ದೇವ ಮನ್ಮತಿಗೆ ॥
ಪೀವರದೇವ ಸನ್ಮತಿದೋರು ದೇವರ । ದೇವಾ ನಿರಂಜನಸಿದ್ಧಾ ॥೧೫೪॥

ಕಾಣದರ್ಥವ ಕಾಣಿಸುವ ಪರಂಜ್ಯೋತಿ ನೀ । ಮಾಣದೆ ನನ್ನೆದೆಯೆಂಬ ॥
ಕೋಣೆಯೊಳಿರು ಹೋದೆಯಾದರೆ ನಿನಗೆ ನಿ । ನ್ನಾಣೆ ಚಿದಂಬರಪುರುಷಾ ॥

ಚಾರುಚಿಂತಾರತ್ನ ಗುಣರತ್ನ ದೇವಶಿ । ರೋರತ್ನ ತ್ರಿಭುವನರತ್ನಾ ॥
ತ್ರೈರತ್ನರೂಪ ಸನ್ಮತಿದೋರು ಸಹಜಶ್ರೃಂ । ಗಾರಾ ನಿರಂಜನಸಿದ್ಧಾ ॥೧೫೬॥

ತೃಣವ ಸುಡುವ ಕಿಚ್ಚಿನಂತಷ್ಟಕರ್ಮವ । ಕ್ಷಣಕೆ ಸುಡುವ ಶಕ್ತಿಯುಳ್ಳ ॥
ಗುಣಾತೀತ ನನ್ನೆದೆಯೊಳಿರಮೃತದ । ಕಣಿಯೆ ಚಿದಂಬರಪುರುಷಾ ॥೧೫೭॥

ವಿಸ್ಮಯರೂಪ ವಿಚಿತ್ರಸಾಮರ್ಥ್ಯ ಆ । ಕಸ್ಮಿಕಮಹಿಮ ಮಹೇಶಾ ॥
ಅಸ್ಮದಾರಾಧ್ಯಾ ಸನ್ಮತಿದೋರು ದಶದಿಶಾ । ರಶ್ಮಿ ನಿರಂಜನಸಿದ್ಧಾ ॥೧೫೮॥

ಹಲವ ಹಂಬಲಿಸನೊಂದನೆ ಪೇಳ್ವೆನಾ ಭವ್ಯ । ಕುಲರತ್ನಭರತಭಾಸ್ಕರನಾ ॥
ಸಲಹಿದಂದದೊಲೆನ್ನ ಸಲಹು ಲೋಕೈಕದೇ। ಬ್ಬಲನೆ ಚಿದಂಬರಪುರುಷಾ॥

ಚಂದ್ರನ ಜಯಿಸುವ ಕೀರ್ತಿಯಿಂದರ್ಕನ । ಚಂದ್ರನೆನಿಪ ತೇಜದಿಂದ ॥
ಚಂದ್ರಾರ್ಕಕೀರ್ತಿವಿಜಯನೆ ಉದ್ಧರಿಸು ಮೋ । ಕ್ಷೇಂದ್ರಾ ನಿರಂಜನಸಿದ್ಧಾ ॥

ಮರುಕವೆಂಬುದು ಮಮಕಾರವೆಂಬುದು ಮತ್ತೆ। ಮರಹೆಂಬಭಾವಬೇರೆಂದಂ॥
ಅರುಹುತ ನನ್ನಂತರಂಗದೊಳಿರು ದೇವ । ರೆರೆಯ ಚಿದಂಬರಪುರುಷಾ ॥

ಆನಂದನಾಟ್ಯಾವಲೋಕನದಕ್ಷ ಬ್ರ । ಹ್ಮಾನಂದಸಿದ್ಧ ಸಮೃದ್ಧಾ ॥
ಧ್ಯಾನೈಕಗಮ್ಯ ಸನ್ಮತಿದೋರು ಮೋಕ್ಷ ಸಂ । ಧಾನಾ ನಿರಂಜನಸಿದ್ಧಾ ॥

---



# ಪರಿಶಿಷ್ಟ ೩

## ಪಂಚನಮಸ್ಕಾರಸ್ತುತಿ

ಶ್ರೀಕರಮಭೀಷ್ಟಸಕಲಸು । ಖಾಕರಮಪವರ್ಗಕಾರಣಂ ಭವಹರಣಂ ॥
ಲೋಕಹಿತಂ ಮನ್ಮನದೊಳ । ಗೇಕಾಗ್ರದಿ ನಿಲ್ಕೆ ನಿರುಪಮಂ ಪಂಚಪದಂ॥
ಪಂಚಪದಂ ಭವಭವದೊಳ್ । ಸಂಚಿತಪಾಪಮನೆ ಕೆಡಿಸಲಾರ್ಕುಮಮೋಘಂ॥
ಪಂಚಮಗತಿಗಿರದೊಯ್ಗುಂ। ಪಂಚಪದಾಕ್ಷರದ ಮಹಿಮೆ ಸಾಧಾರಣಮೇ॥೨॥

ಭವಬದ್ಧವೈರಿಯೆನಿಸಿದ । ಜವನ ಜವಂ ಕೆಡಿಸಿ ಕಳೆವ ದುರಿತಗ್ರಹಮಂ ॥
ಭವವಿಷಹರವರಮಂತ್ರಂ । ಶಿವ ಪದದೊಳ್ ನಿಲಿಸುಗೆನ್ನನೀ ಪಂಚಪದಂ॥೩॥

ಭೋಂಕೆನೆ ಕಳೆಗುಂ ಭವದಘ । ಪಂಕಮ ನಿಗ್ರಹಿಸಿ ಶಾಕಿನೀಗ್ರಹಭೂತಾ ॥
ತಂಕಮನಸುರಪಿಶಾಚಿಯ ಶಂಕೆಯ । ಕೀಳ್ವೈಕಮಂಗಲಂ ಪಂಚಪದಂ ॥೪॥

ಮಾರರಿಪು ವಹ್ನಿಜಲನೃಪ । ಚೋರರುಜಾಘೋರದುಃಖಮಂ ಪಿಂಗಿಸೆತಾಂ॥
ಸಾರೋದಯಪಂಚಪದಂ । ಸೇರಿದವರ್ಗೆಮಗೆ ಮುಕ್ತಿಯುಪ್ಪನ್ನೆವರಂ ॥೫॥

ಸ್ಮರಿಯಿಸಿದೊಡೆ ಕರ್ಮಂಗಳ । ಜರಿಯಿಸುಗುಂ ನೆಗಳ್ದುಡಮ್ಮ । ಚೇತೋ
ಗೃಹದೊಳ್ ॥ ಉದಯಿಸೆ ಮುಕ್ತ್ಯಂಗನೆಯಂ । ವರಿಯಿಸುಗುಂ ಪಂಚಪದಂ
ಸಾಧಾರಣಮೇ ॥೬॥

ಮುಂಚೆ ಜಿನರಾಗಿ ನೀವುಂ । ಪಂಚಮಗತಿ ಪಡೆದೊಡೇನು ಜಿನಪತಿ ಬಳಿಕಂ ॥
ಹೊಂಚಿದೊಡಾಂ ನಿಮ್ಮಲ್ಲಿಗೆ । ಪಂಚನಮಸ್ಕಾರಮೆನ್ನನೈದಿಸದಿಹುದೇ ॥೭॥

ಆಪೊಳ್ತುಂ ಸದ್ಭಕ್ತಿಯೊ । ಳೀ ಪಂಚಪದಾಕ್ಷರಂಗಳಂ ಜಪಿಯಿಸುವಂ ॥
ಗಾಪತ್ತುಂ ಭವತಾಪಂ। ಪಾಪಂ ನೆರೆಗೆಟ್ಟು ಮುಕ್ತಿಯಕ್ಕುಮಮೋಘಂ ॥೮॥

ಸಾರಂಗಳ್ ಪಂಚನಮ । ಸ್ಕಾರಂಗಳ್ ಭವ್ಯಜನಾಲಂಕಾರಂಗಳ್ ॥
ಹಾರಂಗಳ್ ಶ್ರುತಲಕ್ಷ್ಮಿಯ । ಸಾರಂಗಳ್ ಮುಕ್ತಿಸುಖದ ನೆನೆವರ್ಗಕ್ಕೆ ॥೯॥

ಈ ಪಂಚಗುರುಸ್ತೋತ್ರಮ। ನಾಪೊಳ್ತುಂ ಕೇಳ್ವ ಪೇಳ್ವ ಭವ್ಯರ್ ದಿಟದಿಂ॥
ವ್ಯಾಪಿಸಿದ ಘೋರರುಂದ್ರ । ದಾಪತ್ತಂಗಳನೆ ಕಾಣ್ಬರೇ ಸ್ವಪ್ನದೊಳಂ॥೧೦॥

ರಾಗ-ಶಂಕರಾಭರಣ. ಏಕತಾಳ.

ಯಾತ್ರೆಯ ಮಾಡುವ ನಾವೀಗ । ಕ್ಷೇತ್ರವ ನೋಡುವ ಬಲುಬೇಗ ॥ಪ॥
ಧಾತ್ರಿಯೊಳತಿಶಯವಾಗಿರುವ। ಕೀರ್ತಿಯು ಜಗದೊಳ್ ತುಂಬಿರುವ॥ಅ.ಪ॥

ಜಿನಮಂದಿರಗಳ ನೋಡುತಲಿ । ಜಿನದರ್ಶನವಂ ಮಾಡುತಲಿ ॥
ಘನಸಮ್ಯಕ್ತ್ವದಿ ಪೂಜಿಸುತ । ಮುನಿಗಳ ಸಂಘವ ಸೇವಿಸುತ ॥
॥ಯಾತ್ರೆಯ॥ ॥೧॥

ಮುಕ್ತಾಗಿರಿ ಪಾವಾಪುರಿಯು । ಭಕ್ತ್ಯರ್ಹೋಗುವ ಚಂಪಾಪುರಿಯು ॥
ಆರ್ಥಿಯಿಂ ರಚಿಸಿದ ಅಬುಗಡವಂ। ಯುಕ್ತಿಯಿಂ ಗೈದಿಹ ಶತ್ರುಂಜಯವಂ॥
॥ಯಾತ್ರೆಯ॥ ॥೨॥

ಉಜ್ಜಂತಗಿರಿನಾರ್ಪರ್ವತವಂ । ಗಜಪಂತವ ರಾಮಟೇಕ ರಾಜಪುರಿಯು ॥
ಅಜವಿಹಸ್ರೋಣಾಗಿರಿ ಕಾನ್ಪುರವ। ರಾಜಗೃಹವ ಬಹುಪೂಜಿತವ ॥
॥ಯಾತ್ರೆಯ॥ ॥೩॥

ಡಿಲ್ಲೀ ಜಯಪುರ ಸುಂದರವ । ಕಲಕತ್ತ ಕಾಶಿಯ ಮಂದಿರವ ॥
ಹೊಳೆಯುವ ಮೋಲಂತಸ್ತುಗಳೊಳ್ । ಥಳಥಳಿಸುವ ಜಿನಬಿಂಬಗಳ ॥
॥ಯಾತ್ರೆಯ॥ ॥೪॥

ಚಂದ್ರಪುರಿಯ ಸಿಂಹಾಸನಪುರಿಯು। ಸೌಂದರ್ಯದಯೋಧ್ಯಾಕುಂಥಲಗಿರಿಯು॥
ಇಂದ್ರಭವನದಾ ಮಧುವನವ । ಸೌಧರ್ಮೇಂದ್ರನ ಮಂದಿರವ ॥
॥ಯಾತ್ರೆಯ॥ ॥೫॥

ಸಮ್ಮೇದ ಶಿಖರಿಯ ನೋಡೋಣ । ಕರ್ಮಕ್ಷಯಗಳ ಕಾಣೋಣ ॥
ಧರ್ಮವ ನಾಲ್ಕನು ಮಾಡೋಣ । ಕರ್ಮವ ಬೇಗದಿ ಕಳೆಯೋಣ ॥
॥ಯಾತ್ರೆಯ॥ ॥೬॥

ಅಂಗಜಾರಿಯ ಸ್ತೋತ್ರದಲಿ । ಮಂಗಲವತಿಯರು ಮೋದದಲಿ ॥
ಮಾಂಗಿ ತುಂಗಿಗಿರಿ ಮಹತ್ತ್ವದಲಿ । ಶೃಂಗಾರೋತ್ಸವ ನೋಡುತಲಿ ॥
॥ಯಾತ್ರೆಯ॥ ॥೭॥



ಮೇದಿನಿಯಲಿ ಬಡವಾಣಿಯೊಳು । ಆದಿಜಿನೇಶನು ನೆಲಸಿರುವ ॥
ಸಿದ್ಧರ ಕೂಟ ವಿರಾಜಿಸುವ । ಪದ್ಮಪ್ರಭರನು ಪೂಜಿಸುವ ॥ ಯಾತ್ರೆಯ ॥೮॥
ಜಿನದಾಸನು ವಿರಚಿಸಿದ ಸ್ತುತಿಯಂ ಜಿನಶಾಸ್ತ್ರವ ಕೇಳಿರಿ ಮುದದಿಂದ ॥
ಜಿನಧರ್ಮದಿ ನಡೆಯಿರಿ ನೀವೆಂದ । ಜಿನಭಕ್ತಿಯೆ ಮುಕ್ತಿಯ ಕಾರಣವು ॥
॥ಯಾತ್ರೆಯ॥ ॥೯॥

ರಾಗ-ಶಂಕರಾಭರಣ. ಏಕತಾಳ.

ಯಾತ್ರೆಯ ಮಾಡಿದರೇನು ಫಲ । ಕ್ಷೇತ್ರವ ನೋಡಿದರೇನು ಫಲ ॥ಪ॥
ದಾತೃಪಾತ್ರಗಳ ಮರ್ಮವನರಿಯದೆ । ಅರ್ಥವ ಗಳಿಸಿದರೇನು ಫಲ ॥ಅ-ಪ॥
ಕುಟಿಲವ ಬಿಡದಿರ್ಪ ಮನುಜರು ಮಂತ್ರವ। ಪಠನೆಯ ಮಾಡಿದರೇನು ಫಲ॥
ಸಟೆನುಡಿಯುವರೆಲ್ಲ ಮನುಜರು ಬಂದೀ । ನಟನೆಯ ಮಾಡಿದರೇನು ಫಲ ॥
॥ಯಾತ್ರೆಯ॥ ॥೧॥

ಕಪಟತ್ವದೊಳೀ ಕಾಡುವ ಮನುಜರು । ಜಪಗಳ ಮಾಡಿದರೇನು ಫಲ ॥
ಕುಟಿಲಬುದ್ಧಿಯಂ ಬಿಡದೆ ನಿರಂತರಮುಪವಾಸಗಳಿಂದೇನು ಫಲ ॥
॥ಯಾತ್ರೆಯ॥ ॥೨॥

ಮಾತಾಪಿತರನು ಬಳಲಿಸುವಾತನು । ಯಾತ್ರೆಯ ಮಾಡಿದರೇನು ಫಲ ॥
ಘಾತಕತ್ವವನು ಬಿಡದೆಯೆ ಸತತಂ । ನೀತಿಯ ಪೇಳಿದರೇನು ಫಲ ॥
॥ಯಾತ್ರೆಯ॥ ॥೩॥

ಪತಿಯನು ನಿಂದಿಪ ಸತಿಯರು ಬೇಗದಿ । ವ್ರತಗಳ ಮಾಡಿದರೇನು ಫಲ ॥
ಅತಿಥಿಗಳೆಡೆಯಲಿ ಭೇದವ ಮಾಡುತ । ಗತಿಯನು ಬಯಸಿದರೇನು ಫಲ ॥
॥ಯಾತ್ರೆಯ॥ ॥೪॥

ಹೀನಗುಣಂಗಳ ಬಿಡದೆಯೆ ನದಿಯಲಿ । ಸ್ನಾನವ ಮಾಡಿದರೇನು ಫಲ ॥
ಜ್ಞಾನದಿ ಜಿನಪನ ಧ್ಯಾನವ ಮಾಡದೆ । ಮೌನವ ಮಾಡಿದರೇನು ಫಲ ॥
॥ಯಾತ್ರೆಯ॥ ॥೫॥

---